ಕಲ್ಪನೆ ಕಾವ್ಯ



## ನಾನು ನೀನು ಚೆನ್ನಾಗಿದ್ದೀವಾ?

ಎಷ್ಟು ಚೆಂದ ನೋಡು
ನಿನ್ನ ಮುಖ ಕೋಡು
ಬಂದು ನೋಡಿ ನನ್ನ ಜೊತೆ
ಕೂಡಿಕೊಂಡು ಆಡು

ಕಂಗಳಲಿ ತುಂಬಿಹುದು
ನನ್ನ ಪ್ರೀತಿಯ ಕುರುಹು
ಸ್ನೇಹಕೆ ಯಾರು ಸಾಟಿಯಿಲ್ಲ
ಬೆಲ್ಲದಂತಹ ಮನವು

ಮೊಗ್ಗು ಅರಳಿಧಾಂಗ
ನಿನ್ನಯ ಕುಡಿ ಹುಬ್ಬು
ಬಾಗಿ ತೂಗಾಡುವ
ಬಾಳೆಲೆಯಂತಹ ಕಿವಿಯು

ಕತ್ತು ಮೇಲಿನ ಕೊರಳ ಹಾರ
ನನಗೂ ಸ್ವಲ್ಪ ತೊಡಿಸು ಬಾ
ಕಾಡು ಮೇಡು ಎಲ್ಲ ತಿರುಗಿ
ಕಾಯಿ ಹಣ್ಣು ತಿನಿಸು ಬಾ

ಯಾರು ಎಷ್ಟು ಬದುಕಿದರೇನು?
ನೆಲದ ಮೇಲಿನ ಋಣವು
ಇರಲಿ ನಮ್ಮ ಸ್ನೇಹ ಹೀಗೆ
ಉಸಿರಿರುವವರೆಗೂ ಕೊನೆಯು

**ಮೈಲಾರಪ್ಪ ಬೂದಿಹಾಳ**

## ಉಸಿರಿಗೊಂದು ಉಸಿರು

ಸ್ವಂತೀ! ಏನಂತೀ? ಬೇಕಂತೀ?
ಜನರ ಗೊಡವೆ ಏಕಂತೀ?
ಅಜದ ಸನಿಹ ಸಾಕಂತೀ?

ದೈವವದು ಬಹು ದೂರದಿ
ಇದೆಯಾ ದಿಟದಿ? ಬರಿ ಪಟದಿ
ಒಲವು ಬೇಕು ಕಣಕಣದಿ
ನಿಜ ತಣಿವು ಜೀವಸ್ವರದಿ

ಒಳಗೆ ಧಗೆ ಹೊರಗೆ ನಗೆ
ಮನುಜನದಿದೋ ಎರಡು ಬಗೆ
ಅದೇ ಅಜ ಅತಿ ಸಹಜ
ಆದರದು ಎಲ್ಲ ಬೀಡುಬೀಸು

ಶುಕವೋ? ಪಿಕವೋ?
ಶುನಕವೋ? ಶೃಗಾಲವೋ?
ಉಸಿರಿಗೊಂದು ಉಸಿರು
ಸೇರೆ ಬಾಳು ಹಸಿರು.

**ಗುರುರಾಜ ಹ. ನಾಯಕ**